ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ರಾಜ್ಯದ ಗಡಿ ಪ್ರದೇಶಗಳ ಅಭಿವೃದ್ಧಿಗೋಸ್ಕರ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರಚನೆ

363 (1109): ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ):–

ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಗಡಿ ಪ್ರದೇಶಗಳ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೋಸ್ಕರ ಒಂದು ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರವನ್ನು ರಚಿಸುವ ಪ್ರಸ್ತಾವನೆ ಇದೆಯೇ ?

ಆ) ಹಾಗಿಲ್ಲದಿದ್ದಲ್ಲಿ, ಸರ್ಕಾರವು ಅಂತಹ ಪ್ರಾಧಿಕಾರವನ್ನು ರಚಿಸಲು ಕ್ರಮ ತೆಗೆದುಕೊಳ್ಳುವುದೇ;

ಇ) ಗಡಿ ಪ್ರದೇಶಗಳಲ್ಲಿ ವಾಸಿಸುವ ಜನಸಂಖ್ಯೆ ?

ಶ್ರೀ ಶ್ರೀ ರಂಗದೇವರಾಯುಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) 112.18 ಲಕ್ಷ

ಅಭಾವ ಪೀಡಿತ ಚನ್ನರಾಯಪಟ್ಟಣ ತಾಲ್ಲೂಕಿಗೆ ಏತ ನೀರಾವರಿ ಯೋಜನೆಗಳು

367 (1772): ಡಾ।। ಎನ್.ಬಿ. ನಂಜಪ್ಪ (ಶ್ರವಣಬೆಳಗೊಳ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚನ್ನರಾಯಪಟ್ಟಣ ತಾಲ್ಲೂಕು, ನುಗ್ಗೇಹಳ್ಳಿ, ಹೋಬಳಿ ಮತ್ತು ಹಿರೇಸಾವೆ ಹೋಬಳಿಗಳು ಅಭಾವ ಪೀಡಿತ ಪ್ರದೇಶವಾಗಿದ್ದು, ಚನ್ನರಾಯಪಟ್ಟಣದಲ್ಲಿ ಗೊರೂರು ನಾಲೆ ಹರಿದಿದ್ದು, ಅನೇಕ ಭಾಗಗಳು ಇದರಿಂದ ವಂಚಿತವಾಗಿರುವುದರಿಂದ ಚನ್ನರಾಯಪಟ್ಟಣಕ್ಕೆ ಹಿಂದಿನ ಮುಖ್ಯಮಂತ್ರಿಗಳು 2 ಏತ ನೀರಾವರಿಗಳನ್ನು ಕೊಡಲು ಆಶ್ವಾಸನೆ ಕೊಟ್ಟು ಸರ್ವೆ ಕಾರ್ಯಕ್ಕೂ ಆದೇಶ ಕೊಟ್ಟಿದ್ದರೂ ಇದುವರೆಗೂ ಕ್ರಮ ಕೈಗೊಳ್ಳದಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ) ಹಾಗಿದ್ದಲ್ಲಿ ಯಾವಾಗ ಸರ್ವೆ ಮಾಡಿಸಲಾಗುವುದು ಹಾಗೂ ಯಾವಾಗ ಮಂಜೂರಾತಿ ನೀಡಲಾಗುವುದು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಿದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.